ಆದರೆ ಮತ್ತೆ ಅವಳನ್ನು ನಾನು ಸಂಧಿಸುತ್ತೇನೆಂದು ಎಂದೂ ಅಂದುಕೊಂಡಿರಲಿಲ್ಲ. ಹಾಗೂ ಎಂದೋ ಒಂದು ದಿನ ಅವಳನ್ನು ಭೇಟಿಯಾಗುವುದೂ ಕೂಡಾ ನನ್ನ ಸದ್ಯದ ಬದುಕಿನ ಉದ್ದೇಶವೂ ಆಗಿರಲಿಲ್ಲ. ಮೂವತ್ತು ವರುಷಗಳ ನಂತರ ಇದ್ದಕಿದ್ದಂತೆ ಒಂದು ಬೆಳಗ್ಗೆ ಅವಳು ನನ್ನ ಮುಂದೆ ಪ್ರತ್ಯಕ್ಷಳಾಗುತ್ತಾಳೆಂದು, ಹೀಗೆ ಅತಿ ಸಮೀಪದಲ್ಲಿ ಎದುರಾಗುತ್ತಾಳೆಂದು ಈಗೊಂದೆರಡು ದಿನಗಳಿರಲಿ, ಒಂದು ಕ್ಷಣದ ಮುಂಚೆ ಯಾರಾದರೂ ಹೇಳಿದ್ದರೂ ನಾನು ನಂಬುತ್ತಿರಲಿಲ್ಲ. ನಾನವಳನ್ನು ಪ್ರೀತಿಸಿದ್ದೆನೇ? ಗೊತ್ತಿಲ್ಲ. ಅಥವಾ ಕೇವಲ ವಯೋಸಹಜ ಸೆಳೆತವಾಗಿತ್ತೇ, ಅದೂ ಗೊತ್ತಿಲ್ಲ. ಆದರೆ ಇಂತಹ ಯಾವ ಒಣ ವ್ಯಾಖ್ಯಾನಕ್ಕೂ ಸಿಗದ ಸಂಬಂಧಗಳ ಕಗ್ಗಂಟಿನಲ್ಲಿ ಸಿಲುಕಿಸಿ, ಮನದೊಳಗೆ ಹಸುರಾಗಿ, ಹಸಿಯಾಗಿ ಉಳಿದವಳು ಈ ಪಾರು. ಆದರೆ ಜೊತೆಗಿದ್ದಾಗ ಕಾಡಿದ್ದಕ್ಕಿಂತಾ ಜೊತೆಗಿಲ್ಲದಿದ್ದಾಗಲೇ ಹೆಚ್ಚು ಕಾಡಿದ್ದಳು. ಎದುರಿಗಿದ್ದಾಗ ಏನೂ ಅನ್ನಿಸದವಳು, ಎದುರಿಗಿಲ್ಲದೇ ಮರೆಯಾಗಿ ಹೋದಾಗ ಏನೇನೋ ಅನ್ನಿಸಿದವಳು.

ಹೆಚ್ಚೇನೂ ಬದಲಾದಂತೆ ಕಾಣಿಸಲಿಲ್ಲ. ಆದರೂ ನೋಡಿದ ತಕ್ಷಣ ಒಮ್ಮೆಗೇ ಅವಳ ಗುರುತು ಮಾತ್ರ ಹತ್ತಲಿಲ್ಲ. ಹೆಬ್ಬಾವಿನಂತಾ ಕಪ್ಪು ಉದ್ದ ಜಡೆ ನಾಜೂಕಾಗಿ ಕತ್ತರಿಸಿಕೊಂಡು, ಭುಜದ ಮೇಲೆ ಹರಡಿ ಕುಳಿತಿತ್ತು. ಕೂದಲು ನೆರೆತಿರಬಹುದಾದರೂ ಬಣ್ಣ ಹಚ್ಚಿಕೊಂಡಿದ್ದಳೇನೋ, ಮಿರ ಮಿರ ಮಿಂಚುತ್ತಿತ್ತು. ಸ್ವಲ್ಪ ದಪ್ಪಗಾಗಿದ್ದಳು. ಮೊದಲಿನ ಬಳುಕು ಇಲ್ಲದಿದ್ದರೂ ದಪ್ಪ ಅವಳಿಗೊಂದು ಗಾಂಭೀರ್ಯವನ್ನು ನೀಡಿತ್ತು. ಎಲ್ಲಕ್ಕಿಂತಾ ಹೆಚ್ಚಾಗಿ ಸಾಧಾರಣ ಲಂಗ ದಾವಣಿಯಲ್ಲಿ ಕಂಡ ಹುಡುಗಿ, ಚಂದದ ಚೂಡಿದಾರ್‌ನಲ್ಲಿ ಕಂಗೊಳಿಸುತ್ತಿದ್ದಳು. ಉಗುರಿಗೆ ಬಳಿದ ಬಣ್ಣ, ತುಟಿಯ ರಂಗು ಅನಿರೀಕ್ಷಿತವಾದ್ದರಿಂದ ಅವಳನ್ನು ಕಂಡು ಮೇಲೇರಿದ್ದ ಹುಬ್ಬು ಇನ್ನೂ ಚೇತರಿಸಿಕೊಳ್ಳುವುದರಲ್ಲಿತ್ತು.

ಹಾಗೆ ನೋಡಿದರೆ ಎಂದಿನಂತೆ ಬೆಳಗಾದ ಬೆಳಗ್ಗೆ. ಸುಜಿಯನ್ನು ಕ್ಯಾಬ್ ಬರುವ ಸ್ಥಳದಲ್ಲಿ ಡ್ರಾಪ್ ಮಾಡಿ ಆಫೀಸಿಗೆ ಹೊರಟವನಿಗೆ ದಾರಿ ಮಧ್ಯೆ ಕಾರಿನಲ್ಲಿ ಏನೋ ಸಮಸ್ಯೆ ಇರುವುದು ಗೊತ್ತಾಗಿತ್ತು. ಏನೆಂದು ಯೋಚಿಸುವಷ್ಟು ಸಮಯವಿರಲಿಲ್ಲವಾದ್ದರಿಂದ ತಕ್ಷಣ ಕಾರನ್ನು ಸರ್ವಿಸ್ ಸ್ಟೇಷನ್‌ನಲ್ಲಿ ಬಿಟ್ಟು ಲೇಟಾಗುತ್ತೆಂದು ಅವಸರದಲ್ಲಿ ಮೆಟ್ರೊ ಹತ್ತುವವರೆಗೂ ನಾನು ನಾನಾಗಿಯೇ ಇದ್ದೆ.

ಮೆಟ್ರೊದಲ್ಲೂ ಅಷ್ಟೇ, ಗಡಿಬಿಡಿಯಲ್ಲಿ ಹತ್ತಿ ನಿಂತಿದಷ್ಟೇ ಗೊತ್ತು. ನನಗೆದುರಾಗಿ ನಿಂತು, ಕೇವಲ ಎರಡಂಗುಲ ಅಂತರದಲ್ಲಿದ್ದ ಆ ಮುಖವನ್ನು ನಾನು ಗದ್ದಲದಲ್ಲಿ ಗುರುತಿಸಲಿಲ್ಲವೋ ಅಥವಾ ಪರಿಚಯವೇ ಹತ್ತಲಿಲ್ಲವೋ ತಿಳಿಯದು. ಯಾವುದೋ ಯೋಚನೆಯಲ್ಲಿ ಮುಳುಗಿ ಯಾರನ್ನೂ ದಿಟ್ಟಿಸದೇ ಅನ್ಯಮನಸ್ಕನಾಗಿ ನಿಂತಿದ್ದ ನನ್ನನ್ನು ಗುರುತು ಹಿಡಿದಳು, ಸ್ಟೇಷನ್ ಪಕ್ಕದಲ್ಲೇ ಇದ್ದ ಮನೆಗೆ ಕರೆದಳು. ಸುಜಿಯಿನ್ನೂ ಬಹುಶಃ ಅವಳ ಆಫೀಸ್ ತಲುಪಿರಲಿಕ್ಕಿಲ್ಲ. ಧ್ರುವ ಟ್ಯೂಷನ್ ಮುಗಿಸಿ ಮನೆಗೆ ಬಂದು ಹಾಟ್ ಬಾಕ್ಸ್‌ನಲ್ಲಿಟ್ಟಿದ್ದ ತಿಂಡಿ ತಿಂದು ಕಾಲೇಜ್‌ಗೆ ಹೋಗಿಯಾಯಿತೋ ಇಲ್ಲವೋ? ಆಫೀಸಿಗೆ ಹೋಗಿ ಒಂದು ರೌಂಡು ಇವೆಲ್ಲಾ ವಿಚಾರಿಸಬೇಕಾಗಿದ್ದು ನನ್ನ ದಿನಚರಿಯ ಭಾಗ. ಚಾಚೂ ತಪ್ಪದೇ ಪಾಲಿಸಲೇಬೇಕಾದ ಕರ್ತವ್ಯವೊಂದು ಮನದ ಮೂಲೆಯಲ್ಲಿ ಪ್ರಜ್ಞೆಯನ್ನು ಕುಟುಕುತ್ತಲೇ ಇದ್ದರೂ ಯಾವುದೋ ಅಯಸ್ಕಾಂತದ ಸೆಳೆತಕ್ಕೆ ಒಳಗಾದವನಂತೆ ಮಧ್ಯದಲ್ಲೇ ಇಳಿದಿದ್ದೆ. ಹಿಂದೆ ಮುಂದೆ ಯೋಚಿಸದೇ ಅವಳ ಹಿಂದಡಿಯಿಟ್ಟಿದ್ದೆ!

'ನೀನ್ ಒಂಚೂರೂ ಬದಲಾಗಿಲ್ವಲ್ಲೋ ಕೇಶವಾ?' ಮೊದಲು ಮಾತಿಗಡಿಯಿಟ್ಟವಳು ಅವಳೇ. ನಾನು ಸಣ್ಣಗೆ ನಕ್ಕು ಮಾತಿಲ್ಲದ ಮೌನದಲ್ಲಿ ಅವಳನ್ನು ಹಿಂಬಾಲಿಸಿದೆನಷ್ಟೆ. ಸನಿಹದಲ್ಲೇ ಇತ್ತು ಅವಳ ಮನೆ.

'ಅಂಬತ್ತೆ ತೀರ್ಕೊಂಡಿದ್ದು ಕೇಳಿ ಭಾರಿ ಬೇಜಾರಾಯ್ತು ಮಾರಾಯಾ. ಹೋಗಿ ಎರಡು ವರ್ಷವಾಯ್ತಂತಲಾ? ಗೊತ್ತೇ ಇರ್ಲಿಲ್ಲ. ಇವತ್ತ್ ನಾ ಹಿಂಗಿದ್ದೆಯಂದ್ರೆ ಅದ್ಕೆ ಅಂಬತ್ತೆಯೇ ಕಾರಣ.'